(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: . . . ಮಹಾರಾಷ್ಟ್ರ, ಆಂಧ್ರ, ಗೋವಾ, ತಮಿಳುನಾಡು ಇವೆಲ್ಲವೂ ಕೂಡ ಕರ್ನಾಟಕದ ವಿರುದ್ಧವಾಗಿವೆ. ನೀರಾವರಿ ಯೋಜನೆಗಳಲ್ಲಿ ನಮ್ಮ ರಾಜ್ಯದ ಹಿತವನ್ನು ಕಾಪಾಡಿಕೊಳ್ಳುವುದರಲ್ಲಿ ಈ ಸರ್ಕಾರ ವಿಫಲವಾಗಿದೆ. ಮಹಾರಾಷ್ಟ್ರಕ್ಕೆ ಇವರು ಬಲಿಯಾಗುತ್ತಿದ್ದಾರೆ, ...

(ಗೊಂದಲ)

ಉಪಾಧ್ಯಕ್ಷರು: ಎಲ್ಲರೂ ಕೇಳುತ್ತಿರುವುದು ಒಂದೇ. ಈಗ ನೀವು ಕೇಳಿದ್ದು ಸರ್ಕಾರಕ್ಕೆ ಅರ್ಥವಾಗಿದೆ. ಅದಕ್ಕೆ ಅವರು ಉತ್ತರ ಕೊಡುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ನಾರಾಯಣಸ್ವಾಮಿ ಮತ್ತು ಮಾನ್ಯ ಅಶೋಕ್‌ರವರೆ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಚಿವರು ಏನು ಉತ್ತರ ಕೊಡುತ್ತಾರೋ ನೋಡಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮತ್ತು ಈಶ್ವರಪ್ಪನವರು ಹಾಗೂ ಇತರರೆಲ್ಲರೂ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ತಮಿಳುನಾಡಿನಲ್ಲಿ ಅವರ . . .

ಉಪಾಧ್ಯಕ್ಷರು: ಒಂದು ನಿಮಿಷ. ಮಾನ್ಯ ವಾಟಾಳ್‌ರವರೆ, ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಬೇಕು. ತಾವು ಪ್ರಸ್ತಾಪಿಸಿದ್ದಕ್ಕೆ ಮಾನ್ಯ ಸಚಿವರು ಈಗ ಉತ್ತರ ಕೊಡುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ದಯವಿಟ್ಟು ತಾವು ತಮ್ಮ ಸ್ಥಾನಕ್ಕೆ ಬನ್ನಿ, ನಿಮ್ಮ ಜೊತೆಗೆ ನಾವಿದ್ದೇವೆ. ಆದ್ದರಿಂದ ನೀವೇನೂ ಕಾಳಜಿ ಮಾಡತಕ್ಕಂಥ ಅಗತ್ಯ ಇಲ್ಲ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಧರಣಿ ಹಿಂತೆಗೆದುಕೊಂಡು ತಮ್ಮ ಸ್ಥಾನಕ್ಕೆ ಮರಳಿದರು)

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಉಪಾಧ್ಯಕ್ಷರೆ, ಅವರು ತಮ್ಮದೇ ಆದಂತಹ ಓಟಿನ ರಾಜಕಾರಣಕ್ಕಾಗಿ ಆ ರೀತಿ ಮಾಡುತ್ತಿದ್ದಾರೆ. ಅಲ್ಲಿ ಒಮ್ಮೆ ಪ್ರತಿಪಕ್ಷದ ನಾಯಕರಾದಂತಹವರು ಮುಖ್ಯಮಂತ್ರಿಗಳಾಗುತ್ತಾರೆ, ಒಬ್ಬರು ಮುಖ್ಯಮಂತ್ರಿಗಳಾದಂತಹವರು ಪ್ರತಿಪಕ್ಷದ ನಾಯಕರಾಗುತ್ತಾರೆ, ಅವರು ನಿರಂತರವಾಗಿ ಇರತಕ್ಕಂಥ ಆ ಒಂದು ರಾಜಕೀಯದ ಕಾರಣಕ್ಕಾಗಿ, ಕಾವೇರಿ ಎನ್ನುವರಿತಾದ್ದು ಒಂದು ಬಳಸುವಂತಹ ಕೋಲಾಗಿದೆ. ನಾಯಿ ಹೊಡೆಯಲಿಕ್ಕೆ ಯಾವ ಕೋಲಾದರೇನು ಎನ್ನುವಂತಹ ಗಾದೆ ಮಾತಿನಂತೆ, ವಿನಾಕಾರಣವಾಗಿ ಗದರಿಸುವ ತಂತ್ರವನ್ನು ಅವರು ಉಪಯೋಗಿಸುತ್ತಿದ್ದಾರೆ. ಒಂದು ಸುಳ್ಳನ್ನು ಹತ್ತು ಬಾರಿ ಹೇಳಿದರೆ, ಅದು ಸತ್ಯವಾಗುತ್ತದೆ ಎಂದು ಅವರು ಪರಿಭಾವಿಸಿಕೊಂಡಿದ್ದಾರೆ. ಆದರೆ ಸತ್ಯ ಸಂಗತಿ ಏನು ಎಂಬುದು ಮಾನ್ಯ ಪ್ರಧಾನ ಮಂತ್ರಿಗಳಿಗೂ ಕೂಡ ಮನವರಿಕೆಯಾಗಿದೆ. ನ್ಯಾಯಾಧಿಕರಣದಲ್ಲಿ ನಮ್ಮ ಸರ್ಕಾರದ ನಿಲುವನ್ನು ಸಂಪೂರ್ಣವಾಗಿ ನಾವು ಪ್ರತಿಪಾದಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಆಗಲೇ ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. ತಾವು ಆಗಲೇ ಪ್ರಸ್ತಾಪ ಮಾಡಿದಂತೆ, ಕಬಿನಿಯಿಂದ ಎಲ್ಲಾ ನೀರೂ